ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 11-09-1971.

***ಡಬಲ್ ರಿಫೈನ್ ಸ್ಥಿತಿ* (डबल रिफाइन स्टेज)**

ಇಂದು ಮಾತನಾಡಬೇಕೋ? ಅಥವಾ ನೋಡಬೇಕೋ? ನೋಡುವುದೇ ಮಾತನಾಡುವುದಲ್ಲವೇನು? ಇಂತಹ ಅನುಭವವಿದೆಯೇ- ಏನೆಲ್ಲವನ್ನು ಮಾತನಾಡಬೇಕೋ ಅದನ್ನು ಬಾಯಿಂದ ಹೇಳದೇ ನಯನಗಳಿಂದ ಹೇಳುವುದೇ? ಇದು ಸಾಧ್ಯವೇ? ಈ ರೀತಿಯೂ ಆಗುತ್ತದೆಯೇ? ಇಂದು ಮಾಸ್ಟರ್ ಜ್ಞಾನಸಾಗರರು(ನಾಲೆಡ್ಜ್ ಫುಲ್), ಶಕ್ತಿವಂತರು(ಪವರ್ ಫುಲ್), ಸಫಲತಾ ಮೂರ್ತಿಯರು(ಸಕ್ಸಸ್ ಫುಲ್) ಮತ್ತು ಸೇವಾಧಾರಿ (ಸರ್ವೀಸೇಬಲ್) ಆತ್ಮರ ಸಭೆಯಾಗಿದೆ ಅಂದಮೇಲೆ ನಯನಗಳಿಂದಲೇ ಅರಿತುಕೊಳ್ಳಲು ಸಾಧ್ಯವಿಲ್ಲವೆ? ತನ್ನ ಮನಸ್ಸಿನ ಭಾವನೆ ಹಾಗೂ ಬುದ್ಧಿಯ ಸಂಕಲ್ಪಗಳನ್ನು ನಯನಗಳಿಂದ ಪ್ರಕಟ ಮಾಡಲು ಆಗುವುದಿಲ್ಲವೆ? ಇದೂ ಸಹ ವಿದ್ಯೆಯ ಪಾಠವಾಗಿದೆ ಅಂದಮೇಲೆ ಹೇಳಿರಿ ಇಂದು ಬಾಪ್‌ದಾದಾರವರು ಏನನ್ನು ಹೇಳಬಯಸುತ್ತಾರೆ? ತಿಳಿದುಕೊಂಡಿದ್ದೀರಲ್ಲವೆ. ಮಾಸ್ಟರ್ ಜ್ಞಾನಪೂರ್ಣರಾಗಿದ್ದೀರಲ್ಲವೆ.

ಅಂದಮೇಲೆ ಈ ಪಾಠವನ್ನು ಓದಿದ್ದೀರಿ, ಇದೇ ಪಾಠದ ಪರೀಕ್ಷೆಯನ್ನು ಬರೆಯುವುದಕ್ಕಾಗಿ ತಯಾರಾಗಿದ್ದೀರಾ? ಮಹಾವೀರರಂತೂ ಆಗಿದ್ದೀರಿ, ಇದು ಮಹಾವೀರರ ಗ್ರೂಪ್ ಆಗಿದೆಯಲ್ಲವೆ. ಅನ್ಯರ ಬ್ಯಾಟರಿಯನ್ನು ಚಾರ್ಜ್ ಮಾಡುವವರು ಇನ್‌ಚಾರ್ಜ್ ಆಗಿದ್ದಾರೆ. ಬಾಪ್ ದಾದಾ ನೋಡುತ್ತಿದ್ದಾರೆ ತಾವೆಲ್ಲರೂ ನಂಬರ್ವಾರ್ ಪಾಸ್ ಆಗಿರುವ ಗ್ರೂಪ್ ಆಗಿದ್ದೀರಿ. ಕೆಲವು ಮಾತುಗಳನ್ನು ಕೆಲವು ಅನುಭವಗಳನ್ನು ನೋಡುತ್ತಾ, ಪಾಸ್ ಮಾಡುತ್ತಾ-ಮಾಡುತ್ತಾ ಪಾಸ್ ಆಗಿಲ್ಲವೆ? ಮೂರುಪ್ರಕಾರದ ಪಾಸ್‌ಗಳಿವೆ. ಈ ಮೂರೂ ಪ್ರಕಾರದ ಪಾಸ್ ಶಬ್ದಗಳಲ್ಲಿ ಪಾಸ್ ಆಗಬೇಕಾಗಿದೆ. ಒಂದನೆಯದಾಗಿದೆ- ಯಾವುದೇ ಮಾತು ಅಥವಾ ಮಾರ್ಗವನ್ನು ಪಾಸ್ ಮಾಡುವುದು, ಎರಡನೆಯದು- ವಿದ್ಯೆಯಲ್ಲಿ ಪಾಸ್ ಆಗುವುದು ಮತ್ತು ಸಮೀಪವನ್ನೂ ಪಾಸ್ ಎಂದು ಹೇಳುತ್ತಾರೆ. ಪಾಸ್ ಅರ್ಥಾತ್ ಸಮೀಪರತ್ನ. ಈ ಮೂರೂಪ್ರಕಾರದ ಪಾಸ್ ಶಬ್ದದಲ್ಲಿ ಪಾಸ್ ಆಗಿದ್ದೀರಾ? ತ್ರಿಶೂಲದ ತಿಲಕ ಅರ್ಥಾತ್ ಮೂರುಪ್ರಕಾರದ ಪಾಸ್. ಈ ತಿಲಕವು ಕಾಣಿಸುವುದಿಲ್ಲವೆ? ಈ ಗ್ರೂಪ್‌ನ ಮಸ್ತಕದಲ್ಲಿ ತ್ರಿಶೂಲದ ತಿಲಕವು ತಮ್ಮೆಲ್ಲರಿಗೆ ಕಾಣಿಸುತ್ತಿದೆಯೇ? ಬಾಪ್‌ದಾದಾರವರಿಗೆ ಇಂದಿನ ಸಭೆಯು ಹೇಗೆ ಕಾಣಿಸುತ್ತದೆ ತಿಳಿದಿದೆಯೇ? ತಮ್ಮ ಸಾಕ್ಷಾತ್ಕಾರವಂತೂ ಆಗುತ್ತದೆಯಲ್ಲವೆ? ಈಗೀಗಿನ ತಮ್ಮ ಸಾಕ್ಷಾತ್ಕಾರವಾಗುತ್ತಿದೆಯೇ? (ದಾದಿಯವರಿಗೆ) ನೋಡಿ, ಇವರು ಸಾಕ್ಷಾತ್ಕಾರಮೂರ್ತಿಯಾಗಿದ್ದಾರೆ ಮತ್ತು ತಾವು ಸಾಕ್ಷಿಯಾಗಿದ್ದೀರಿ. ಅಂದಮೇಲೆ ಹೇಳಿ, ಇವರ ಗ್ರೂಪಿನ ಯಾವ ಸಾಕ್ಷಾತ್ಕಾರವಾಗುತ್ತಿದೆ? ಇವರು (ದಾದಿ) ಮೈಕ್ ಆಗಿದ್ದಾರೆ, ತಾವು (ದೀದಿ) ಮೈಟ್ ಆಗಿದ್ದೀರಿ. ಹೌದಲ್ಲವೆ! ಇವರು ಮೈಟ್ ಕೊಡುತ್ತಾರೆ, ಆ ಮೈಕ್ ಮಾತನಾಡುತ್ತದೆ. ಬಾಪ್‌ದಾದಾರವರಿಗೆ ಏನು ಸಾಕ್ಷಾತ್ಕಾರವಾಗುತ್ತಿದೆ? ಏಕೆ ಈಗ ಡಬಲ್ ಕಿರೀಟವಿಲ್ಲವೇನು? ಒಂದುವೇಳೆ ಡಬಲ್ ಕಿರೀಟಧಾರಣೆ ಮಾಡದಿದ್ದರೆ ಭವಿಷ್ಯದಲ್ಲಿಯೂ ಡಬಲ್ ಕಿರೀಟವು ಸಿಗುವುದಿಲ್ಲ. ಅಂದಾಗ ಈ ದಿನ ಡಬಲ್ ಕಿರೀಟಧಾರಿ, ತಿಲಕಧಾರಿ, ಸಿಂಹಾಸನಾಧಿಕಾರಿ, ರಾಜಋಷಿ ದರ್ಬಾರನ್ನು ನೋಡುತ್ತಿದ್ದೇವೆ. ಭವಿಷ್ಯದ ದರ್ಬಾರಂತೂ ಈ ದರ್ಬಾರಿನ ಮುಂದೆ ನೀರಸವೆನಿಸುತ್ತದೆ. ಒಂದುವೇಳೆ ಈಗೀಗ ತಮ್ಮ ಸಂಗಮಯುಗಿ ಕಿರೀಟ, ತಿಲಕ ಮತ್ತು ಸಿಂಹಾಸನಾಧಿಕಾರಿ ಪುರುಷೋತ್ತಮ ಮರ್ಯದಾ ಸಂಪನ್ನ ಸ್ವರೂಪವನ್ನು ನೋಡಿಕೊಳ್ಳಿ, ಜೊತೆಜೊತೆಗೆ ತಮ್ಮ ಭವಿಷ್ಯಸ್ವರೂಪವನ್ನೂ ನೋಡಿಕೊಳ್ಳಿ. ಇವರೆಡರಲ್ಲಿ ಯಾವ ರೂಪವು ಸ್ಪಷ್ಟ ಆಕರ್ಷಣಾಮೂರ್ತಿ ಅಲೌಕಿಕ ದಿವ್ಯ ಹಾಗೂ ಆತ್ಮೀಯತೆಯಿಂದ ಕಾಣಿಸುತ್ತದೆ? ಈಗಿನದೋ ಅಥವಾ ಭವಿಷ್ಯದ್ದೋ? ತಮ್ಮ ಸ್ವರೂಪಗಳ ಸದಾ ಸಾಕ್ಷಾತ್ಕಾರ ಮಾಡುತ್ತಾ ಮತ್ತು ಮಾಡಿಸುತ್ತಾ ಇರುತ್ತೀರೋ ಅಥವಾ ಇನ್ನೂ ಪರದೆಯ ಒಳಗಡೆ ತಯಾರಾಗುತ್ತಿದ್ದೀರೋ? ಸ್ಟೇಜಿನ ಮೇಲೆ ಬಂದಿಲ್ಲವೆ? ವರ್ತಮಾನ ಸಮಯ ಸ್ಟೇಜಿನ ಮೇಲೆ ಯಾವ ರೂಪದಲ್ಲಿರುತ್ತೀರಿ? ಈಗಿನ ತಮ್ಮ ಸ್ಟೇಜನ್ನು ಎಲ್ಲಿಯವರೆಗೆ ಬಂದಿದೆ ಎಂದು ತಿಳಿದುಕೊಳ್ಳುತ್ತೀರಿ?

ಒಂದಾಗಿದೆ- ಫೈನಲ್ ಸ್ಟೇಜ್ (ಅಂತಿಮ ಸ್ಥಿತಿ) ಅಂದಮೇಲೆ ಫೈನಲ್ ಇದೆಯೇ? ಫೈನ್ ಆಗಿದೆಯೇ? ಅಥವಾ ರಿಫೈನ್ (ಪರಿಶುದ್ಧ)ಆಗಿದೆಯೇ? ಈಗಿನ ಕಾಲದಲ್ಲಿ ಇದು ಗೊತ್ತಿದೆಯೇ- ಕೇವಲ ರಿಫೈನ್ ಅಲ್ಲ, ಡಬಲ್ ರಿಫೈನ್ ಆಗಿರುತ್ತದೆ. ಅಂದಮೇಲೆ ಈಗಿನ ಸ್ಥಿತಿಯು ರಿಫೈನ್ ಆಗಿದೆಯೇ? ಡಬಲ್ ರಿಫೈನ್ ಆಗಬೇಕೋ ಅಥವಾ ರಿಫೈನ್ ಆಗಬೇಕೋ? ಒಂದುಬಾರಿಯ ರಿಫೈನಂತೂ ಪೂರ್ಣವಾಯಿತಲ್ಲವೆ. ಈಗ ಡಬಲ್ ರಿಫೈನ್ ಆಗಲು ಬಂದಿದ್ದೀರಿ, ಫೈನಲ್‌ನ ದಿನಾಂಕ ಯಾವುದು? ಒಂದುವೇಳೆ ಮೊದಲೇ ಆಗಲಿಲ್ಲವೆಂದರೆ ತಮ್ಮೆಲ್ಲರ ಭಕ್ತರು ಹಾಗೂ ಪ್ರಜೆಗಳು ತಮ್ಮ ಸಂಪೂರ್ಣ ಸ್ವರೂಪಗಳ ಸಾಕ್ಷಾತ್ಕಾರವನ್ನು ಹೇಗೆ ಮಾಡುವರು? ಆ ರೀತಿ ನೀವು ಇಲ್ಲವೆಂದರೆ ನಿಮ್ಮ ಚಿತ್ರಗಳನ್ನೂ ಸಹ ಅಂಕುಡೊಂಕಾಗಿ ಚಿತ್ರಿಸುತ್ತಾರೆ. ಒಂದುವೇಳೆ ತಮ್ಮ ಸಂಪೂರ್ಣತೆಯ ಫೈನಲ್ ಸ್ಟೇಜಿನ ಸಾಕ್ಷಾತ್ಕಾರ ಮಾಡಿಕೊಳ್ಳದಿದ್ದರೆ ಭಕ್ತರು ಚಿತ್ರಗಳನ್ನು ಹೇಗೆ ಚಿತ್ರಿಸುವರು? ನಿಮ್ಮ ಚಿತ್ರವನ್ನೂ ಪರಿಶುದ್ಧವಾಗಿ ಚಿತ್ರಿಸುವುದಿಲ್ಲ ಆದ್ದರಿಂದ ಮೊದಲೇ ತಮ್ಮ ಸಂಪೂರ್ಣ ಸಾಕ್ಷಾತ್ಕಾರ ಮಾಡಿಸಿಕೊಳ್ಳಬೇಕು. ಈಗಲೇ ತಮ್ಮ ಭಕ್ತರಲ್ಲಿ ಗುಣಗಾನ ಮಾಡುವ ಸಂಸ್ಕಾರವನ್ನು ತುಂಬುವುದರಿಂದಲೇ ದ್ವಾಪರಯುಗದಲ್ಲಿ ಬರುತ್ತಿದ್ದಂತೆಯೇ ತಮ್ಮ ಚಿತ್ರಗಳ ಮುಂದೆ ಗುಣಗಾನ ಮಾಡುತ್ತಾರೆ. ಸರ್ವಾತ್ಮರಲ್ಲಿ ಸರ್ವ ರೀತಿ-ಪದ್ಧತಿ ಸಂಸ್ಕಾರಗಳನ್ನು ಈಗಿನಿಂದಲೇ ತುಂಬಿಸಬೇಕಲ್ಲವೆ. ಇದು ತುಂಬಿಸಿಕೊಳ್ಳುವ ಸಮಯವಾಗಿದೆ ನಂತರ ಪ್ರಾಕ್ಟಿಕಲ್‌ನಲ್ಲಿ ಮಾಡುವ ಸಮಯವು ಬರುವುದು. ಹೇಗೇಗೆ ತಾವಾತ್ಮರಲ್ಲಿ ಇಡೀ ಕಲ್ಪದ ಪೂಜೆ ಮತ್ತು ಪೂಜಾರಿತನದ ಎರಡೂ ಸಂಸ್ಕಾರಗಳನ್ನು ಈಗ ತುಂಬಿಸಿಕೊಳ್ಳುತ್ತೀರೋ, ಎಷ್ಟು ಪೂಜ್ಯರಾಗುತ್ತೀರೋ ಅದರಂತೆಯೇ ಪೂಜಾರಿತನದ ಸ್ಥಿತಿಯು ತಾನಾಗಿಯೇ ಬರತೊಡಗುವುದು. ಹೇಗೆ ತಾವಾತ್ಮರಲ್ಲಿ ಇಡೀ ಕಲ್ಪದ ಸಂಸ್ಕಾರವನ್ನು ತುಂಬಿಸಿಕೊಳ್ಳುವಿರೊ ಹಾಗೆಯೇ ತಮ್ಮ ಭಕ್ತರಲ್ಲಿಯೂ ಈಗಲೇ ಸಂಸ್ಕಾರಗಳು ತುಂಬುತ್ತೀರಿ. ಅಂದಮೇಲೆ ಹೇಗೆ ತಮ್ಮ ಸ್ವರೂಪವಿರುವುದೋ ಹಾಗೆಯೇ ಸಂಸ್ಕಾರವನ್ನು ರೂಪಿಸಿಕೊಳ್ಳುತ್ತೀರಿ. ಆದ್ದರಿಂದ ಈಗ ಬೇಗ-ಬೇಗನೆ ತಮ್ಮನ್ನು ಫೈನಲ್ ಸ್ಥಿತಿಗೆ ತನ್ನಿರಿ. ಯಾವ ರೀತಿ ಫೈನಲ್ ಆಗಬೇಕೆಂದರೆ ಫೈನ್ ಕಟ್ಟುವಂತಾಗಬಾರದು. ಆದ್ದರಿಂದ ಡಬಲ್ ರಿಫೈನ್ ಆಗಿಬಿಟ್ಟರೆ ಅವರಿಗೆ ಫೈನ್ ಬೀಳುವುದಿಲ್ಲ. ಫೈನಲ್ ಆತ್ಮರ ಯಾವುದೇ ಫೈಲ್ ಉಳಿದುಕೊಳ್ಳುವುದಿಲ್ಲ ಆದ್ದರಿಂದ ಯಾವುದೆಲ್ಲವೂ ಫೈಲ್ ಉಳಿದುಕೊಂಡಿದೆಯೋ ಅದನ್ನು ಸಮಾಪ್ತಿ ಮಾಡಿ. ಒಂದುವೇಳೆ ಮಹಾವೀರರು ಫೈನ್ ಕೊಡಬೇಕಾಗಿಬಂದರೆ ಅಂತಹವರು ಮಹಾವೀರರಾದರೆ? ಆದ್ದರಿಂದಲೇ ಹೇಳಿದೆವು- ಇಂದು ಮಾತನಾಡುವುದಲ್ಲ, ಸನ್ನೆಯಿಂದಲೇ ತಿಳಿದುಕೊಳ್ಳುವವರಾಗಿದ್ದೀರಿ. ಇದಂತೂ ಕಿರೀಟ ಹಾಗೂ ಸಿಂಹಾಸನಧಾರಿ ಗ್ರೂಪ್ ಆಗಿದೆ ಅಂದಮೇಲೆ ಅಂತಹವರು ಕೇಳುವುದರಿಂದ ಹೇಗೆ ತಿಳಿದುಕೊಳ್ಳುವರು? ಒಂದುವೇಳೆ ಈಗಲೂ ಹೇಳಿದಾಗ ತಿಳಿದುಕೊಳ್ಳುವವರಾದರೆ ಹೇಳಿದಮೇಲೆ ಮಾಡಿದರೆ ಮನುಷ್ಯರಾದರಲ್ಲವೆ. ತಾವೆಲ್ಲರೂ ಮನುಷ್ಯರಿಗಿಂತಲೂ ಶ್ರೇಷ್ಠರಾಗಿದ್ದೀರಿ. ಬ್ರಾಹ್ಮಣರೆಂದಾದರೂ ಹೇಳಿ, ಫರಿಶ್ತೆಗಳೆಂದಾದರೂ ಹೇಳಿ, ಫರಿಶ್ತೆಗಳು ಸನ್ನೆಯಿಂದಲೇ ತಿಳಿದುಕೊಳ್ಳುತ್ತಾರೆ. ಧರಣಿಯ ನಿವಾಸಿಗಳು ಹೇಳಿದರೆ ಮಾತ್ರ ತಿಳಿದುಕೊಳ್ಳುತ್ತಾರೆ. ಒಳ್ಳೆಯದು.

ಬಾಪ್‌ದಾದಾ ಈ ಗ್ರೂಪ್‌ಅನ್ನು ಇಡೀ ವಿಶ್ವದ ಮುಂದೆ ಏನೆಂದು ತಿಳಿದುಕೊಳ್ಳುತ್ತಾರೆ? ನೀವು ಹೇಗಿದ್ದೀರೋ ಅದನ್ನೇ ಹೇಳಿರಿ. ನೀವಂತೂ ಇಡೀ ಸೃಷ್ಟಿಯಲ್ಲಿ ಶರಣಾಗತ ಮಾಡುವವರಾಗಿದ್ದೀರಿ, ಶರಣಾಗತರಾಗುವವರಲ್ಲ. ಬಾಪ್‌ದಾದಾರವರ ಮುಂದೆ ಶರಣಾಗತ ರಾಗುವವರೂ ಅಲ್ಲ. ತಂದೆಯನ್ನು ಸೇವಕನನ್ನಾಗಿ ಮಾಡಿಕೊಳ್ಳುವವರಾಗಿದ್ದೀರಿ ಅಂದಮೇಲೆ ಶರಣಾಗತರಾಗಿದ್ದೀರೋ ಅಥವಾ ಶರಣಾಗತಿ ಮಾಡಿಕೊಳ್ಳುವವರಾದಿರೋ? ಇಡೀ ಸೃಷ್ಟಿಯಲ್ಲಿ ಯಾವುದೆಲ್ಲಾ ಮಹಿಮೆ ಮಾಡಲು ಯೋಗ್ಯ ಶಬ್ದಗಳಿವೆಯೋ ಅದೆಲ್ಲವೂ ನೀವಾಗಿದ್ದೀರಿ. ಇಂದು ಬಾಪ್‌ದಾದಾರವರು ಸಂಪೂರ್ಣ ರೂಪವನ್ನು ನೋಡುತ್ತಿದ್ದಾರೆ. ಯಾರು ಒಂದು ಸಂಕಲ್ಪದಲ್ಲಿಯೂ ಆಜ್ಞೆಯನ್ನು ಬಿಟ್ಟು ನಡೆಯುವುದಿಲ್ಲವೋ ಅವರನ್ನೇ ಆಜ್ಞಾಕಾರಿಗಳೆಂದು ಹೇಳಲಾಗುವುದು. ಈ ಗ್ರೂಪ್‌ಅಂತೂ ಇದರಲ್ಲಿ ಪಾಸ್ ಆಗಿದ್ದೀರಲ್ಲವೆ. ಸದಾ ತಮ್ಮನ್ನು ಆಜ್ಞಾಕಾರಿಯ ಸ್ವರೂಪದಲ್ಲಿ ಸ್ಥಿತ ಮಾಡಿಕೊಂಡು ನಂತರ ಯಾವುದೇ ಸಂಕಲ್ಪ ಮಾಡಿ. ಈ ರೀತಿ ಯಾರು ಸಂಪೂರ್ಣ ಆಜ್ಞಾಕಾರಿಗಳಾಗಿದ್ದಾರೆಯೋ ಅವರೇ ಸಂಪೂರ್ಣ ಪ್ರಾಮಾಣಿಕರೂ ಆಗಿರುತ್ತಾರೆ. ಈ ಗ್ರೂಪಂತೂ ಸಂಪೂರ್ಣತೆಗೆ ಸಮೀಪವಿದ್ದೀರಲ್ಲವೆ. ಸಂಪೂರ್ಣ ಪ್ರಾಮಾಣಿಕತೆ ಎಂದು ಯಾವುದಕ್ಕೆ ಹೇಳಲಾಗುತ್ತದೆ. ಪ್ರಾಮಾಣಿಕರ

ಮುಖ್ಯಗುಣಗಳೇನು? ಅವರ ಮುಖ್ಯಗುಣವೇನೆಂದರೆ ಪ್ರಾಣ ಹೋದರೂ ಪರವಾಗಿಲ್ಲ, ಆದರೆ ಪ್ರತೀ ವಸ್ತುವಿನ ಸಂಭಾಲನೆ ಮಾಡುತ್ತಾರೆ. ಯಾವುದೇ ವಸ್ತು ವ್ಯರ್ಥ ಹಾಗೂ ನಷ್ಟಮಾಡುವುದಿಲ್ಲ. ಒಂದುವೇಳೆ ಸಂಕಲ್ಪ, ಸಮಯ, ಶಬ್ದ ಮತ್ತು ಕರ್ಮ- ಈ ನಾಲ್ಕರಲ್ಲಿ ಯಾವುದನ್ನೇ ವ್ಯರ್ಥವಾಗಿ ಕಳೆಯುತ್ತೀರಿ ಅಥವಾ ನಷ್ಟದ ಖಾತೆಯಲ್ಲಿ ಹೋಗುತ್ತದೆಯೆಂದರೆ ಅವರಿಗೆ ಸಂಪೂರ್ಣ ಪ್ರಾಮಾಣಿಕರೆಂದು ಹೇಳಲಾಗುವುದೇ? ಏಕೆಂದರೆ ಯಾವಾಗಿನಿಂದ ಜನ್ಮ ಪಡೆದುಕೊಂಡಿರೋ ಅರ್ಥಾತ್ ಆಜ್ಞಾಕಾರಿ, ಪ್ರಾಮಾಣಿಕರಾಗಿದ್ದೀರಾ? ಒಂದು ಚಿಕ್ಕಪೈಸೆಯಲ್ಲಿಯೂ ಪ್ರಾಮಾಣಿಕರಾಗಿರುತ್ತಾರೆ ಅಂದಮೇಲೆ ಯಾವಾಗಿನಿಂದ ಜನ್ಮಪಡೆದೆವೋ ಆಗಿನಿಂದ ಮನಸ್ಸು ಅರ್ಥಾತ್ ಸಂಕಲ್ಪ, ಸಮಯ ಮತ್ತು ಕರ್ಮ ಎಲ್ಲವನ್ನೂ ತಂದೆಯ ಈಶ್ವರೀಯ ಸೇವಾರ್ಥವಾಗಿ ಮಾಡುತ್ತೇವೆ - ಈ ಪ್ರತಿಜ್ಞೆ ಮಾಡಿದ್ದೀರಾ? ಸರ್ವ ಸಮರ್ಪಣೆಯಾಗಿದ್ದೀರಾ? ಇದೆಲ್ಲವೂ ತಂದೆಯ ಈಶ್ವರೀಯ ಸೇವಾರ್ಥವಾಯಿತು. ಒಂದುವೇಳೆ ಈಶ್ವರೀಯ ಸೇವೆಯ ಬದಲು ಎಲ್ಲಿಯಾದರೂ ಸಂಕಲ್ಪ, ಸಮಯ, ತನುವಿನ ಮೂಲಕ ವ್ಯರ್ಥ ಕಾರ್ಯವಾದರೆ ಅಂತಹವರಿಗೆ ಏನು ಹೇಳುವರು- ಅವರು ಸಂಪೂರ್ಣ ಪ್ರಾಮಾಣಿಕರೇ? ಒಂದೊಂದು ಕ್ಷಣ ದೊಡ್ಡಮಾತೇನು ಎಂದು ತಿಳಿದುಕೊಳ್ಳಬೇಡಿ. ಒಂದುವೇಳೆ ಒಂದು ನಯಾಪೈಸೆಯಲ್ಲಿಯೂ ಪ್ರಾಮಾಣಿಕತೆಯಿಲ್ಲವೆಂದರೆ ಅವರಿಗೆ ಸಂಪೂರ್ಣ ಪ್ರಾಮಾಣಿಕರು ಎಂದು ಹೇಳುವುದಿಲ್ಲ. ಈ ಗ್ರೂಪಂತೂ ಸಂಪೂರ್ಣ ಪ್ರಾಮಾಣಿಕ, ಸಂಪೂರ್ಣ ಆಜ್ಞಾಕಾರಿಗಳಾಗಿದ್ದೀರಲ್ಲವೆ. ಇಂತಹ ಸಂಪೂರ್ಣ ನಂಬಿಗಸ್ಥರು, ಆಜ್ಞಾಕಾರಿಗಳು, ಪ್ರಾಮಾಣಿಕರಾದ ಮಕ್ಕಳ ಗ್ರೂಪ್‌ಗೆ ಏನೆಂದು ಹೇಳುವುದು? ನಮಸ್ತೆ ನಮಸ್ತೆಯ ನಂತರ ಮತ್ತೇನಿರುತ್ತದೆ? ತಂದೆ ಯಂತೂ ಸಂಪೂರ್ಣ ಆಜ್ಞಾಕಾರಿಯಾಗಿದ್ದಾರೆ. ಒಬ್ಬರು ಇನ್ನೊಬ್ಬರನ್ನು ನೋಡಿ ಹರ್ಷಿತರಾಗುತ್ತಿದ್ದೀರಲ್ಲವೆ. ಇದು ಸಂಗಮಯುಗದ ದರ್ಬಾರಿನ ಶೃಂಗಾರವಾಗಿದೆ.

ಅವ್ಯಕ್ತ ಮುರಳಿ 11-09-1971.

***ಡಬಲ್ ರಿಫೈನ್ ಸ್ಥಿತಿ***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತಿಯೊಂದು ಮಾತನ್ನು ನಯನಗಳಿಂದಲೇ ತಿಳಿಸಬಲ್ಲ ಅನುಭವೀ ಸ್ವರೂಪ.

2. ನಾನು ಮನಸ್ಸಿನ ಭಾವನೆಯನ್ನು ಮತ್ತು ಬುದ್ಧಿಯ ಸಂಕಲ್ಪಗಳನ್ನು ನಯನಗಳಿಂದಲೇ ಪ್ರಕಟ ಮಾಡುವ ಮಾಸ್ಟರ್ ಜ್ಞಾನ ಸಾಗರನು.

3. ನಾನು ಇತರರ ಬ್ಯಾಟರಿಯನ್ನು ಚಾರ್ಜ್ ಮಾಡುವ ಇನ್ಚಾರ್ಜ್ ಸ್ವರೂಪ.

4. ನಾನು ಯಾವ ಸಮಸ್ಯೆಯನ್ನಾದರೂ ಅಥವಾ ಮಾರ್ಗವನ್ನಾದರೂ ದಾಟುವ ಅರ್ಥಾತ್ ಪಾಸ್ ಮಾಡುವ, ಅಭ್ಯಾಸದಲ್ಲಿ ಪಾಸ್ ಆಗುವ, ಮತ್ತು ಸಮೀಪವಿರುವ - ಈ ಮೂರರಲ್ಲಿಯೂ ಪಾಸಾಗಿರುವ ತ್ರಿಶೂಲ ತಿಲಕಧಾರಿ.

5. ನಾನು ಈಗ ಡಬಲ್ ಕಿರೀಟವನ್ನು ಧಾರಣೆ ಮಾಡಿ ಭವಿಷ್ಯದಲ್ಲಿ ಡಬಲ್ ಕಿರೀಟವನ್ನು ಪಡೆದಿದ್ದೇನೆ.

6. ನಾನು ಸಂಗಮಯುಗೀ ಕಿರೀಟಧಾರಿ, ತಿಲಕಧಾರಿ, ಸಿಂಹಾಸನಾಧಿಕಾರಿ ಮತ್ತು ಪುರುಷೋತ್ತಮ ಮರ್ಯಾದಾ ಸಂಪನ್ನ ಸ್ವರೂಪ.

7. ನಾನು ಡಬಲ್ ಪರಿಶುದ್ಧವಾಗಿ ಅಂತಿಮ ಸ್ಥಿತಿಗೆ ತಲುಪಿ ಪ್ರಜೆಗಳು ಮತ್ತು ಭಕ್ತರಿಗೆ ನನ್ನ ಸಂಪೂರ್ಣ ಸ್ವರೂಪದ ಸಾಕ್ಷಾತ್ಕಾರವನ್ನು ಮಾಡಿಸಿರುವ ಸಾಕ್ಷಾತ್ಕಾರ ಮೂರ್ತಿ.

8. ನಾನು ಸರ್ವಾತ್ಮರಲ್ಲಿ ಸರ್ವ ವಿಧವಾದ ಆಚಾರಗಳು, ಪದ್ಧತಿಗಳ ಸಂಸ್ಕಾರವನ್ನು ಈಗಲೇ ತುಂಬಿ ನಂತರ ಅವುಗಳನ್ನು ಪ್ರತ್ಯಕ್ಷ ಮಾಡಿರುವ ಪ್ರತ್ಯಕ್ಷ ಸ್ವರೂಪ.

9. ನಾನು ಇಡೀ ಕಲ್ಪಕಾಗಿ ಪೂಜ್ಯ ಸಂಸ್ಕಾರಗಳನ್ನು ಈಗಲೇ ರಚಿಸಿಕೊಂಡಿರುವ ಪೂಜ್ಯ ಸ್ವರೂಪ.

10. ನಾನು ಇಡೀ ಕಲ್ಪದ ಸಂಸ್ಕಾರಗಳನ್ನು ಈಗಲೇ ರಚಿಸಿಕೊಂಡು ಭಕ್ತರಿಗೂ ಈಗಲೇ ಸಂಸ್ಕಾರಗಳನ್ನು ತುಂಬಿ ಅಂತಿಮ ಸ್ಥಿತಿಗೆ ತಲುಪಿದ್ದೇನೆ.

11. ನಾನು ಡಬಲ್ ಪರಿಶುದ್ಧವಾಗಿ ಎಲ್ಲಾ ಫೈಲ್ ಗಳನ್ನು ಸಮಾಪ್ತಿ ಮಾಡಿಕೊಂಡಿರುವ ಮಹಾವೀರನು.

12. ನಾನು ಇಡೀ ಸೃಷ್ಟಿಯನ್ನು ಶರಣಾಗತ ಮಾಡಿಕೊಂಡಿರುವ ಮಹಿಮಾ ಯೋಗ್ಯ ಸ್ವರೂಪ.

13. ನಾನು ಪ್ರತಿಯೊಂದು ಸಂಕಲ್ಪ ತಂದೆಯ ಆಜ್ಞೆಯನುಸಾರ ಮಾಡುವ ಆಜ್ಞಾಕಾರಿ.

14. ನಾನು ಸಂಕಲ್ಪ, ಸಮಯ, ಮಾತು ಮತ್ತು ಕರ್ಮ - ಈ ನಾಲ್ಕನ್ನೂ ಸಮರ್ಥವಾಗಿಸಿಕೊಂಡಿರುವ ಪ್ರಾಮಾಣಿಕ ಮತ್ತು ಆಜ್ಞಾಕಾರಿ.